ಆ) ಹಾಗಿದ್ದಲ್ಲಿ ಕಳಪೆ ಹತ್ತಿ ಬೀಜ ಮಾರಾಟ ಮಾಡಿದವರ ಮೇಲೆ ಸರ್ಕಾರದವರು ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಎಸ್. ಬಂಗಾರಪ್ಪ (ಕೃಷಿ ಮತ್ತು ತೋಟಗಾರಿಕೆ ಸಚಿವರು).—

ಆ) ೧೯೯೦-೯೧ನೇ ಸಾಲಿನಲ್ಲಿ ಕರ್ನಾಟಕ ರಾಜ್ಯ ಬೀಜ ನಿಗಮವು ವಿತರಣೆ ಮಾಡಿದ ಹತ್ತಿ ಬೀಜವು ಕಳಪೆ ದರ್ಜೆಯಾಗಿದ್ದರ ಬಗ್ಗೆ ಸರ್ಕಾರಕ್ಕೆ ಯಾವ ದೂರು ಬಂದಿರುವುದಿಲ್ಲಾ. ಈ ಪ್ರಮಾಣಿತ ಹತ್ತಿ ಬೀಜಗಳು ಕರ್ನಾಟಕ ರಾಜ್ಯ ಬೀಜ ಪ್ರಮಾಣದ ಸಂಸ್ಥೆಯ ಎಲ್ಲಾ ಗುಣ ನಿಯಂತ್ರಣ ಪರೀಕ್ಷೆಗಳಲ್ಲಿ ತೇರ್ಗಡೆಯಾಗಿ ಪ್ರಮಾಣೀಕರಿಸಲ್ಪಟ್ಟಿವೆ.

ಆ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶಾಲಾ ಪಠ್ಯಪುಸ್ತಕಗಳ ವಿತರಣೆ.

೨೭೮. ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಶಿಕ್ಷಣ, ಯುವಜನ ವ್ಯವಹಾರಗಳು, ಕ್ರೀಡೆಗಳು, ಕನ್ನಡ ಮತ್ತು ಸಂಸ್ಕೃತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಶಾಲಾ ಪಠ್ಯ ಪುಸ್ತಕಗಳ ವಿತರಣೆ ಬಗ್ಗೆ ಸರ್ಕಾರದವರು ತೆಗೆದುಕೊಂಡ ಕ್ರಮಗಳೇನು?

ಆ) ೧೯೯೦-೯೧ರಲ್ಲಿ ಪ್ರಾಥಮಿಕ ಶಾಲಾ ಮಕ್ಕಳಿಗೆ ಉಚಿತ ಪಠ್ಯ ಪುಸ್ತಕಗಳನ್ನು ಹಂಚಿಲಾಗುವುದೇ ?

ಶ್ರೀ ಕೆ. ಹೆಚ್. ರಂಗನಾಥ್ (ಶಿಕ್ಷಣ ಮಂತ್ರಿಗಳು).—

ಅ) ಪಠ್ಯ ಪುಸ್ತಕಗಳ ಹಂಚಿಕೆ ಮತ್ತು ವಿತರಣೆಯ ಜವಾಬ್ದಾರಿಯನ್ನು ಕರ್ನಾಟಕ ಸಹಕಾರಿ ಗ್ರಾಹಕರ ಮಹಾಮಂಡಿಯವರಿಗೆ ಈ ವರ್ಷವೂ ವಹಿಸಲಾಗಿದೆ.

ಆ) ಈ ವಿಷಯವು ಸರ್ಕಾರದ ಸಕ್ರಿಯ ಪರಿಶೀಲನೆಯಲ್ಲಿದೆ.

ಕೋಲಾರ ಜಿಲ್ಲೆಯ ಬೇತಮಂಗಲ ತಾಲ್ಲೂಕಿನಲ್ಲಿ ಮಿನಿ ಮರಿ ಸಾಕಾಣಿಕೆ ಕೇಂದ್ರವನ್ನು ತೆರೆಯುವ ಬಗ್ಗೆ

೨೮೦. ಶ್ರೀ ಎಂ. ನಾರಾಯಣ ಸ್ವಾಮಿ (ಬೇತಮಂಗಲ).—ಮಾನ್ಯ ಬಂದರು ಹಾಗೂ ಮೀನುಗಾರಿಕೆ, ವಸತಿ ಹಾಗೂ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕೋಲಾರ ಜಿಲ್ಲೆಯ ಬೇತಮಂಗಲ ತಾಲ್ಲೂಕಿನಲ್ಲಿ ಮಿನಿಮರಿ ಸಾಕಾಣಿ ಕೇಂದ್ರವನ್ನು ತೆರೆಯಲಾಗಿದೆಯೇ ?

ಆ) ಇಲ್ಲದಿದ್ದಲ್ಲಿ, ಅಲ್ಲಿ ಮೀನುಗಾರಿಕೆಯನ್ನು ಅಭಿವೃದ್ಧಿಪಡಿಸುವ ಸಲುವಾಗಿ ಮೀನುಮರಿ ಸಾಕಾಣಿ ಕೇಂದ್ರವನ್ನು ತೆರೆಯಲು ಸರ್ಕಾರವು ಕ್ರಮ ಕೈಗೊಳ್ಳುವುದೇ ?

ಶ್ರೀ ಟಿ. ಎನ್. ನರಸಿಂಹಮೂರ್ತಿ (ಮೀನುಗಾರಿಕೆ, ಬಂದರುಗಳು, ವಸತಿ ಮತ್ತು ನಗರಾಭಿವೃದ್ಧಿ ಸಚಿವರು).

ಅ) ಹೌದು.

ಆ) ಉತ್ತರ ಉದ್ಭವಿಸುವುದಿಲ್ಲ.

ದಾವಣಗೆರೆಯಲ್ಲಿರುವ ಸರ್ಕಾರಿ ಕಲಾ ಶಾಲೆ

೪೪೧ (ಎ). ಶ್ರೀ ವೈ. ಎಂ. ವೀರಣ್ಣ (ದಾವಣಗೆರೆ).—ಮಾನ್ಯ ಶಿಕ್ಷಣ ಯುವಜನ ವ್ಯವಹಾರಗಳು ಕ್ರೀಡೆಗಳು, ಕನ್ನಡ ಮತ್ತು ಸಂಸ್ಕೃತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಾವಣಗೆರೆಯಲ್ಲಿರುವ ಸರ್ಕಾರಿ ಕಲಾಶಾಲೆಯು ಕರ್ನಾಟಕದಲ್ಲಿರುವ ಏಕೈಕ ಸರ್ಕಾರಿ ಕಲಾಶಾಲೆಯೆಂದು ಸರ್ಕಾರದ ಗಮನಕ್ಕೆ ಬಂದಿದೆಯೇ ?